ಮೂ. ದಾ. ನಂ. 73/2018

ಪಿ.ಡಬ್ಲ್ಯು 1

(ಇಂದು ದಿನಾಂಕ 08-12-2022 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಮುಖ್ಯ ವಿಚಾರಣೆ – ವಾದಿ ಪರ ಶ್ರೀ ಎಸ್.ವಿ.ಎ. ವಕೀಲರಿಂದ–**

ನಾನು ಈ ಪ್ರಕರಣದಲ್ಲಿ ವಾದಿಯ ಪರ ಸಾಕ್ಷ್ಯ ಇದ್ದು, ನನ್ನ ಪ್ರಮಾಣಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇದೆ. ಅದನ್ನು ನಾನೇ ಹೇಳಿ ಬರೆಸಿದ್ದೇನೆ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ, ಸದರಿ ದಾಖಲಾತಿಯಲ್ಲಿ ಇರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲಾತಿ ವಿಲ್ ನಾಮೆ ಆಗಿದ್ದು, ಅದನ್ನು ನಿ.ಪಿ. 26 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 26(ಎ) ಎಂದು ಗುರುತಿಸಲಾಯಿತು. (ಸದರಿ ದಾಖಲಾತಿಯನ್ನು ಅಸಲು ದಾವಾ ಸಂಖ್ಯೆ 63/2006 ರಲ್ಲಿ ನಿ.ಪಿ. 57 ಎಂದು ಹಾಗೂ ಸಾಕ್ಷಿದಾರರ ಸಹಿಗಳನ್ನು ನಿ.ಪಿ. 57(ಎ) ಯಿಂದ 57(ಇ) ವರೆಗೆ ಗುರುತಿಸಲಾಗಿರುತ್ತದೆ.) ನನಗೆ ತೋರಿಸಲಾದ ನಿ.ಪಿ. 26 ರ ದಾಖಲಾತಿ ವಿಲ್ ನಾಮೆ ಆಗಿದ್ದು, ಅದನ್ನು ಶಂಕರ ಗಣೇಶ ಹೆಗಡೆ ರವರು ವಾದಿಯ ಪರವಾಗಿ ಬರೆದುಕೊಟ್ಟಿರುತ್ತಾರೆ. ನನ್ನೊಂದಿಗೆ ಸಾಕ್ಷಿದಾರರಾಗಿ ಗಿರೀಜಾ ಶಂಕರ ಹೆಗಡೆ ರವರು ಸಹಿ ಮಾಡಿರುತ್ತಾರೆ. ವಿಲ್ ನಾಮೆ ಬರೆದುಕೊಟ್ಟಿರುವಂತಹ ಶಂಕರ ಹೆಗಡೆ ರವರು ತಮ್ಮ ಎಡಗೈ ಹೆಬ್ಬೆಟ್ಟಿನ ಗುರುತು ಹಾಕಿರುತ್ತಾರೆ. ಸಾಕ್ಷಿಯು ಶಂಕರ ಹೆಗಡೆರವರ ಎಡಗೈ ಹೆಬ್ಬೆಟ್ಟಿನ ಗುರುತನ್ನು ಗುರುತಿಸಿದ್ದು, ಅದನ್ನು ನಿ.ಪಿ. 26(ಬಿ) ಎಂದು ಗುರುತಿಸಲಾಯಿತು. (ಸದರಿ ಶಂಕರ ಹೆಗಡೆ ರವರ ಸಹಿಯನ್ನು ಸಲು ದಾವಾ ಸಂಖೆ 63/2006 ರ ದಾವೆಯಲ್ಲಿ ನಿ.ಪಿ. 57(ಎ), ನಿ.ಪಿ. 57(ಬಿ) ಮತ್ತು ನಿ.ಪಿ. 57(ಸಿ) ಎಂದು ಗುರುತಿಸಲಾಗಿರುತ್ತದೆ) ವಿಲ್ ನಾಮೆಯನ್ನು ಪಿ.ಜಿ.ಹೆಗಡೆ ವಕೀಲರು ತಯಾರಿಸಿದ್ದು, ಅವರು ಸಹ ಸಹಿ ಮಾಡಿರುತ್ತಾರೆ. ಸಾಕ್ಷಿಯು

ಮತ್ತೊಬ್ಬ ಸಾಕ್ಷಿದಾರರ ಹಾಗೂ ವಿಲ್ ನಾಮೆ ತಯಾರಿಸಿದ ವ್ಯಕ್ತಿಯ ಸಹಿಯನ್ನು ನೋಡಿ ಗುರುತಿಸಿರುತ್ತಾರೆ.

**(ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಡಿ.ಎಸ್.ಬಿ. ವಕೀಲರು ಸಮಯ ಕೋರಿದ್ದು, ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ, ಕುಮಟಾ